ಕರ್ನಾಟಕ ವಿಧಾನ ಸಭೆ
ಶುಕ್ರವಾರ 30ನೇ ನವೆಂಬರ್ 1990
ಮಾರ್ಗಶಿರ 9, ಶಕ 1912

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 9–30 ಗಂಟೆಗೆ ಸಮಾವೇಶಗೊಂಡಿತು

[**ಉಪಾಧ್ಯಕ್ಷರು :** (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ) ಅವರು ಪೀಠವನ್ನು ಅಲಂಕರಿಸಿದರು]

ಸಂತಾಪ ಸೂಚನೆ

ಉಪಾಧ್ಯಕ್ಷೆಣಿಯವರು : ವಿಧಾನ ಸಭೆಯ ಮಾಜಿ ಸದಸ್ಯರಾದ ಡಾ; ಎನ್.ಕೆ. ನಾಯಕ್‌ರವರು ತಾ: 25–11–90 ರಂದು ನಿಧನರಾದರೆಂದು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು 1962 ರಿಂದ 1967ರ 3ನೇ ವಿಧಾನಸಭೆಗೆ ಮುಧೋಳ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಇವರು ವೃತ್ತಿಯಲ್ಲಿ ವೈದ್ಯರಾಗಿದ್ದು ಶಿಕ್ಷಣ ಮತ್ತು ಸಹಕಾರ ಕ್ಷೇತ್ರಗಳಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿರುವುದರ ಜೊತೆಗೆ ಮುಧೋಳ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ ಕೀರ್ತಿ ಇವರದ್ದಾಗಿರುತ್ತದೆ.

ಮೃತರ ಗೌರವಾರ್ಥ ಮಾನ್ಯ ಸಭೆಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು.)

ಉಪಾಧ್ಯಕ್ಷೆಣಿಯವರು :– ದಿವಂಗತರ ಕುಟುಂಬದವರಿಗೆ ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಕಳುಹಿಸಿಕೊಡಲಾಗುವುದು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಚ.ಪ್ರ. 174 (508

ಉಪಾಧ್ಯಕ್ಷೆಣಿಯವರು :– ಮಾನ್ಯ ಸಿದ್ದನ ಗೌಡರ್‌ರವರ ಪ್ರಶ್ನೆಯನ್ನು ಮಾನ್ಯ ಕೌಜಲಗಿಯವರಿಗೆ ಆಥರೈಸ್ ಮಾಡಲಾಗಿದೆ. ಆದರೆ ಅವರ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

ಶಿವರಾಮೇಗೌಡರೇ, ತಮ್ಮ ಚು ಪ್ರ. 178 (589)ಗೂ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ. ಮುಂದೆ ತೆಗೆದುಕೊಳ್ಳೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಮ್ಮ ಪ್ರಶ್ನೆಗಳು ಬರುವುದೇ ಅಪರೂಪ. ಈ ರೀತಿ ಅಪರೂಪಕ್ಕೆ ಬಂದಂತ ಸಂದರ್ಭದಲ್ಲೂ ಈ ರೀತಿ ಹಾರಿಕೆಯ ಉತ್ತರವನ್ನು ಸರ್ಕಾರದವರು ಕೊಟ್ಟರೆ ಹೇಗೆ ಈ ತಾಪತ್ರಯ ಇನ್ನೂ ತಪ್ಪಲಿಲ್ಲವಲ್ಲಾ. ನಾನು ಸುಮಾರು 120 ಪ್ರಶ್ನೆಗಳನ್ನು ಈ ಅಧಿವೇಶನದಲ್ಲಿ ಕಳುಹಿಸಿದ್ದೇನೆ. 8–10 ದಿವಸ ಆದಮೇಲೆ ಇವತ್ತು ಈ ಒಂದು ಪ್ರಶ್ನೆ ಬಂದಿರುವುದನ್ನು ನೋಡುತ್ತಿದ್ದೇನೆ. ಆದರೆ ಇದಕ್ಕೆ ಸರ್ಕಾರದಿಂದ ಉತ್ತರ ಇಲ್ಲ ಎಂದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ತೀವ್ರ ಕ್ರಮ ತೆಗೆದುಕೊಳ್ಳಬೇಕು. ತಾವು ಸರ್ಕಾರಕ್ಕೆ ಸ್ಪಷ್ಟ ಆದೇಶವನ್ನು ಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಶಿಗ್ಗಾಂವ ನಗರದಲ್ಲಿ ಮುನ್ಸೀಫ್ ನ್ಯಾಯಾಲಯ ತೆರೆಯುವ ಬಗ್ಗೆ

594. **ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) :–** ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?